ದಿನಾಂಕಃ 30-11-2017 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಲ್‌ವಿಆರ್ ವಕೀಲರಿಂದಃ-

ದಿನಾಂಕ 27-11-2012 ರಂದು ವಾದಿಗಳು ಈ ದಾವೆ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಿಡಿ- 4 ಆರ್‌ಟಿಸಿಯಂತೆ ಪ್ರತಿವಾದಿ 1 ರಿಂದ 4 ರವರಿಗೆ ಜಂಟಿ ಖಾತೆ ಇದೆ ಎಂದರೆ ನಿಜ. ರಾಜೇಗೌಡ ಅಣ್ಣತಮ್ಮಂದಿರು ಎಷ್ಟು ಜನ ಎಂದು ನನಗೆ ಗೊತ್ತಿಲ್ಲ. ಅವರ ತಂಗಿ ಇದ್ದರು, ತೀರಿಕೊಂಡಿರುತ್ತಾರೆ. ಈ ಕೇಸು ನಾಗಮ್ಮ ಸಲ್ಲಿಸಿರುತ್ತಾರೆ, ಬೇರೆಯವರ ಹೆಸರು ಗೊತ್ತಿಲ್ಲ. ನಾನು ಆಸ್ತಿಯನ್ನು ಖರೀದಿ ಮಾಡಿದ ಒಂದು ವರ್ಷಕ್ಕೆ ಈ ಕೇಸಿನ ವಿಚಾರ ಗೊತ್ತಾಯಿತು. ರಾಜೇಗೌಡರ ಹೆಸರಿಗೆ ಖಾತೆ ಆಗಿರುವ ಸಂಬಂಧ ಮ್ಯುಟೇಶನ್‌ನ್ನು ಹಾಜರುಪಡಿಸಿರುವ ವಿಚಾರ ನನಗೆ ಗೊತ್ತಿಲ್ಲ. ನಾಗಮ್ಮ ಮತ್ತು ರಾಜೇಗೌಡರ ಮಧ್ಯೆ ವಿಭಾಗ ಪತ್ರ ಆಗಿರುವ ವಿಚಾರ ನನಗೆ ಗೊತ್ತಿಲ್ಲ. ಗೌರಮ್ಮನಿಗೆ ನಾನು ಖರೀದಿ ಮಾಡಿರುವ ಆಸ್ತಿ ಯಾವ ರೀತಿ ಬಂದಿತು ಎಂದು ನನಗೆ ಗೊತ್ತಿಲ್ಲ. ಗೌರಮ್ಮನಿಂದ ನಾನು ಯಾವುದೇ ದಾಖಲಾತಿಗಳನ್ನು ಪಡೆದಿರುವುದಿಲ್ಲ. ಸರ್ವೇ ನಂ.25/1 ದುರಸ್ಥಿಯಾಗಿ ಸರ್ವೇ ನಂ.25/3 ಆಗಿದೆ ಎಂದರೆ ನಿಜ. ಸಾಕ್ಷಿಗೆ ಆರ್‌ಟಿಸಿಯನ್ನು ತೋರಿಸಿ, ಸದರಿ ಆರ್‌ಟಿಸಿಯನ್ನು ನಿಪಿ-39 ಎಂದು ಗುರುತಿಸಲಾಯಿತು. ಸಾಕ್ಷಿಗೆ ಮ್ಯುಟೇಶನ್ ರಿಜಿಸ್ಟ್ರರ್‌ನ್ನು ಅದನ್ನು ಒಪ್ಪಿರುತ್ತಾರೆ. ಸದರಿ ಮ್ಯುಟೇಶನ್ ರಿಜಿಸ್ಟ್ರರ್‌ನ್ನು ನಿಪಿ-40 ಎಂದು ಗುರುತಿಸಲಾಯಿತು. ಈ ಕೇಸು ಹಾಕಿರುವ ವಿಚಾರ ಗೊತ್ತಿದ್ದರು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಐಟಂ ನಂ.1 ನ್ನು ನಾನು ಖರೀದಿ ಮಾಡುವುದಕ್ಕಿಂತ ಮೊದಲೇ ಈ ದಾವೆ ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗೌರಮ್ಮನ ಗಂಡನ ವಂಶವೃಕ್ಷವನ್ನು ನಾನು ಪಡೆದಿರುವುದಿಲ್ಲ. ಸಾಕ್ಷಿ ಮುಂದುವರೆದು ಆರ್‌ಟಿಸಿ ಪಡೆದಿರುತ್ತೇನೆ ಎಂದು ಹೇಳುತ್ತಾರೆ. ದಾವಾ ಆಸ್ತಿ ಸ್ವಾಧೀನವನ್ನು ಈಗ ವಾದಿಗಳಿರುತ್ತಾರೆ ಎಂದರೆ ಸಾಕ್ಷಿ ಯಾರು ಸ್ವಾಧೀನ ಇರುವುದಿಲ್ಲ, ಪಾಳು ಬಿದ್ದಿದೆ ಎಂದು ಹೇಳುತ್ತಾರೆ. ಈ ಕೇಸಿರುವ ವಿಚಾರ ಗೊತ್ತಿದ್ದರೂ ಸಹ ದುರಸ್ತಿ ಮಾಡಿಸಿ ಪೋಡು ಮಾಡಿಸಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಮ್ಯುಟೇಶನ್ ರಿಜಿಸ್ಟ್ರರ್‌ನ್ನು ತೋರಿಸಿ, ಒಪ್ಪಿರುತ್ತಾರೆ. ಸದರಿ ಮ್ಯುಟೇಶನ್ ನಿಪಿ-41 ಎಂದು ಗುರುತಿಸಲಾಯಿತು. ಈ ಕೇಸು ಹಾಕಿರುವ ವಿಚಾರ ಗೊತ್ತಿದ್ದರು ವಾದಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಈ ಆಸ್ತಿ ಖರೀದಿಸಿದ್ದೇನೆ ಎಂದರೆ ಸರಿಯಲ್ಲ. ಗೌರಮ್ಮ ಮತ್ತು ಅವರ

ಮಕ್ಕಳಿಗೆ ಮಾತ್ರ ದಾವಾ ಐಟಂ ನಂ.1 ನ್ನು ಮಾರಾಟ ಮಾಡುವ ಹಕ್ಕಿರಲಿಲ್ಲ ಎಂದರೆ ಸರಿಯಲ್ಲ. ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

**(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ ಹೇ.ಕೇ.ಸ.ಇ.ಒ.,

**(ಶ್ರೀನಾಥ್ ಕೆ.)**
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಕೆ.ಆರ್.ನಗರ.